ಪ್ರ.330 (70)

# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ, ಇವರು ನಿಯಮ 330ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ

## ಪ್ರಶ್ನೆ

ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಹಾಗೂ ತತ್ಸಮಾನ ವೃಂದಗಳಲ್ಲಿ ಬೆಂಗಳೂರು ಹಾಗೂ ಮೈಸೂರು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ "ಬಿ" ವೃಂದದ ಅಧಿಕಾರಿಗಳ ಕಾಲಮಿತಿ ಹಾಗೂ ಸ್ವಯಂಚಾಲಿತ ಬಡ್ತಿಗಳನ್ನು (10, 15, 20) ನೀಡುವಲ್ಲಿ ವಿನಾ ಕಾರಣ ಇಲಾಖೆಗಳಲ್ಲಿ ವಿಳಂಬವಾಗುತ್ತಿದ್ದು, ಇದರಿಂದ ಸದರಿ ಅಧಿಕಾರಿಗಳಿಗೆ ತುಂಬಾ ಅನ್ಯಾಯವಾಗುತ್ತಿದ್ದು, ಸದರಿಯವರಿಗೆ ಕಾಲಕಾಲಕ್ಕೆ ನೀಡಬೇಕಾಗಿರುವ ಬಡ್ತಿಗಳನ್ನು ಸಕಾಲದಲ್ಲಿ ನೀಡಬೇಕೆಂಬ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

## ಉತ್ತರ

ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯಿಂದ ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ ಬಡ್ತಿ ಹೊಂದಿದ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಹುದ್ದೆಯಲ್ಲಿ 10, 15 ವರ್ಷದ ಬಡ್ತಿಯನ್ನು ಸೇವಾ ಅವಧಿಯಲ್ಲಿ ಪಡೆಯದೇ ಇದ್ದಲ್ಲಿ ಅಂತಹ ಪ್ರೌಢಶಾಲಾ ಸಹಶಿಕ್ಷಕರು ಪ್ರೌಢಶಾಲಾ ಹುದ್ದೆಯಲ್ಲಿ 10, 15 ವರ್ಷ ಪೂರ್ಣಗೊಳಿಸಿದ ನಂತರ ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

ಸರ್ಕಾರದ ಆದೇಶದ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(8), ದಿನಾಂಕ 14.06.2012ರಲ್ಲಿ ತಿಳಿಸಿರುವಂತೆ ಸೇವಾವಧಿಯಲ್ಲಿ ಒಂದು ಪದೋನ್ನತಿಯನ್ನು ಪಡೆಯದೇ ಇರುವ ಶಿಕ್ಷಕರಿಗೆ 20,25,30 ವರ್ಷಗಳ ವಿಶೇಷ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರಾತಿ ಮಾಡಲು ಅವಕಾಶವಿರುತ್ತದೆ. ಆದರೆ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯಿಂದ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗೆ ಬಡ್ತಿ ಪಡೆದಿರುವುದರಿಂದ ಅಂದರೆ ಸದರಿ ಶಿಕ್ಷಕರುಗಳು ತಮ್ಮ ಸೇವಾವಧಿಯಲ್ಲಿ ಪದೋನ್ನತಿ ಪಡೆದಿರುವುದರಿಂದ 20,25,30 ವರ್ಷಗಳ ಹೆಚ್ಚುವರಿ ವಿಶೇಷ ವೇತನ ಬಡ್ತಿ ಮಂಜೂರಾತಿಗೆ ಅವಕಾಶವಿರುವುದಿಲ್ಲ.

ಇಪಿ 36 ಎಸ್‌ಓಹೆಚ್ 2021

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು